# ನವಿಲುಗನ್ನಡಿ

ಜನವರಿ ತಿಂಗಳ 'ಮಯೂರ'ದ ಮುಖಪುಟ ಆಕರ್ಷಕವಾಗಿದೆ.

'ನವಿಲುಗರಿ' ಅಂಕಣದಲ್ಲಿ ಪ್ರಕಟವಾದ ಎಂ.ಎಚ್. ನಾಯಕ ಬಾಡ ಅವರ 'ತಾರು' ಕತೆ ಹಳೆಯ ಬರಹಗಳ ವೈಭವದ ದಿನಗಳನ್ನು ನೆನಪಿಸಿತು. ನಾಯಕ ಬಾಡ ಅವರ ಅನೇಕ ಕತೆಗಳನ್ನು ಓದಿದ ನನ್ನ ನೆನಪನ್ನು ಇದು ಮರುಕಳಿಸಿತು.

ಮಧುರಾ ಕರ್ಣಮ್ ಅವರ 'ಆಕ್ರಮಣ' ಕತೆ ವಾಸ್ತವಕ್ಕೆ ತೀರಾ ಹತ್ತಿರವಾಗಿದೆ.

ನೀಲಮ್ಮ ಕುಮಾರಪ್ಪ, ಲಿಂಗಸಗೂರು

ಉಷಾ ನರಸಿಂಹನ್ ಅವರ 'ಸೀರುಡಿಕೆ' ಕತೆ ಮನೋಜ್ಞವಾಗಿತ್ತು. ಹೆಣ್ಣು ಅಬಲೆಯಾದಾಗ ಸಮಾಜ ಎಷ್ಟೊಂದು ಕ್ರೂರವಾಗಿ ವರ್ತಿಸುತ್ತದೆ ಎಂಬುದನ್ನು ಕತೆಯಲ್ಲಿ ಎಳೆ ಎಳೆಯಾಗಿ ವಿವರಿಸಲಾಗಿದೆ. 'ಆಕ್ರಮಣ' ಕತೆ ಸಕಾಲಿಕ.

ಪಿ.ಎನ್.ಎಂ. ಗುಪ್ತ, ಬೆಂಗಳೂರು

ಜಿ. ಪ್ರವೀಣ್ ಕುಮಾರ್ ಅವರ ಕತೆ 'ಎಡೆ' ಬದುಕಿನ ಮತ್ತೊಂದು ಮಗ್ಗುಲನ್ನು ತೋರಿಸಿದೆ. ಕತೆಯನ್ನು ಮತ್ತೆ ಮತ್ತೆ ಓದಿದಾಗ ಅದರ ಅಂತರಂಗ ಅನಾವರಣಗೊಂಡು ಅದಕ್ಕೊಂದು ವಿಶೇಷ ಅರ್ಥ ಇರುವುದು ಗೋಚರಿಸುತ್ತದೆ.

ಕೊಹಿಮ, ಬಸರಕೋಡು

ನ್ಯಾಯವಾದಿ ಹಾಗೂ ವ್ಯಂಗ್ಯಚಿತ್ರಕಾರರಾಗಿದ್ದ ಕನ್ನೆಪ್ಪಾಡಿ ರಾಮಕೃಷ್ಣ ಕುರಿತ ಲೇಖನ 'ಶಿಂಗಣ್ಣ ಎಂಬ ಶ್ರೀಸಾಮಾನ್ಯ' (ಪರಂಜ್ಯೋತಿ) ಮನಸ್ಸನ್ನು ಆಪ್ತವಾಗಿ ತಟ್ಟುತ್ತದೆ.

ಮುಕುಂದ ಹೆರಕಲ್ಲ, ಕಲಬುರ್ಗಿ




ಈ ಸಂಚಿಕೆ ಚೆನ್ನಾಗಿ ಮೂಡಿ ಬಂದಿದೆ. ಕತೆಗಳಲ್ಲಿ ವೈವಿಧ್ಯವಿದೆ.

ಗೋಪಾಲಕೃಷ್ಣ ಪೈ ಅವರ 'ಅನಂತ' ಕತೆ ಮನಸ್ಸಿಗೆ ಮುದ ನೀಡಿದೆ. ನಲವತ್ತು ವರ್ಷಗಳ ಹಿಂದಿನ 'ತಾರು' ಕತೆ ಓದಿದಾಗ ಬಹಳ ಆನಂದವಾಯಿತು. ಹಳೆಯ ಬರಹಗಳಲ್ಲಿ ಕಾಣುವ ಭಾಷೆಯ ಸೊಬಗು ನನ್ನನ್ನು ಹಿಡಿದಿಟ್ಟಿತು.

ಎನ್. ಮಹಾದೇವ, ಚೆನ್ನೈ

ಟಿ. ತಿಮ್ಮಪ್ಪ ಅವರ ಕತೆ 'ಬಾ ಬೆಳಕೆ ಅರ್ಥಪೂರ್ಣವಾಗಿದೆ. ಕತೆಯ ಶೈಲಿ, ನಿರೂಪಣೆ ತುಂಬಾ ಚೆನ್ನಾಗಿದೆ. ಮಿರ್ಜಾ ಬಷೀರರ 'ಜಿನ್ನಿ' ಕತೆ ಹೆಣ್ಣುಮಕ್ಕಳು ಎದುರಿಸುತ್ತಿರುವ ವಾಸ್ತವನ್ನು ಚಿತ್ರಿಸಿದೆ.

ಪದ್ಮಜಾ ಜ. ಉಮರ್ಜಿ, ಹುಬ್ಬಳ್ಳಿ

ರವಿರಾಜ ಬೈಕಂಪಾಡಿ ಅವರ ಪತ್ತೇದಾರಿ ಕತೆ 'ನಿಗೂಢ ಹಿಂಬಾಲಕ' ಉತ್ತಮವಾಗಿದೆ. ಕೊನೆಯವರೆಗೂ ಕುತೂಹಲವನ್ನು ಉಳಿಸಿಕೊಂಡ ಈ ಕತೆ ಚೆನ್ನಾಗಿ ಓದಿಸಿಕೊಳ್ಳುತ್ತದೆ.

ಸದಾಶಿವ ಜಿ.ಕೆ., ಮೈಸೂರು